ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 655
2. ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 04.03.2021

ಕ್ರ.ಸಂ.	ಪ್ರಶ್ನೆಗಳು	ಉತ್ತರಗಳು
ಅ)	ಬಯಲುಸೀಮೆಯ ಜಿಲ್ಲೆಗಳಿಗೆ ನೀರು ಪೂರೈಸುವ ಮಹತ್ವಾಕಾಂಕ್ಷೆಯ ಎತ್ತಿನಹೊಳೆ ಯೋಜನೆಯ ಕಾಮಗಾರಿ ಯಾವ ಹಂತದಲ್ಲಿದೆ;	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಕಾಮಗಾರಿಗಳ ಹಂತದ ವಿವರಗಳನ್ನು **ಅನುಬಂಧ** ದಲ್ಲಿ ಲಗತ್ತಿಸಲಾಗಿದೆ.
ಆ)	ಸದರಿ ಯೋಜನೆಗಾಗಿ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ; ಇನ್ನೂ ಎಷ್ಟು ಎಕರೆ ಭೂಮಿಯ ಅವಶ್ಯಕತೆ ಇದೆ;	ಸರ್ಕಾರದ ಆದೇಶ ಸಂಖ್ಯೆ ಜಸಂಇ 95 ವಿಬ್ಯಾಇ 2016, ದಿನಾಂಕ:13.12.2016 ರಂತೆ 448 ಎಕರೆ – 32.08 ಗುಂಟೆ ಜಮೀನನ್ನು ನೇರ ಖರೀದಿಯಡಿ ಸ್ವಾಧೀನಪಡಿಸಿಕೊಳ್ಳಲು ಆದೇಶವಾಗಿರುತ್ತದೆ. ಅದರಂತೆ ಇಲ್ಲಿಯವರೆವಿಗೂ 383 ಎಕರೆ – 15 ಗುಂಟೆ ಜಮೀನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಉಳಿಕೆ 65 ಎಕರೆ – 17.08 ಗುಂಟೆ ಜಮೀನಿನ ನೊಂದಣಿ ಕಾರ್ಯ ಪ್ರಗತಿಯಲ್ಲಿದೆ. ಭೂಸ್ವಾಧೀನ ಕಾಯ್ದೆ 2013 ರಡಿ 2958 ಎಕರೆ – 31.04 ಗುಂಟೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಉಳಿಕೆ 8302 ಎಕರೆ – 25.04 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಬೇಕಾಗಿದ್ದು, ಭೂಸ್ವಾಧೀನ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ.
ಇ)	ಸದರಿ ಯೋಜನೆಗಾಗಿ ಈವರೆಗೂ ಎಷ್ಟು ಹಣ ವೆಚ್ಚ ಮಾಡಲಾಗಿದೆ; ಇನ್ನೂ ಎಷ್ಟು ಹಣದ ಅಗತ್ಯೆ ಇದೆ; (ಸಂಪೂರ್ಣ ವಿವರ ನೀಡುವುದು)	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಜನವರಿ 2021 ರವರೆಗೆ ರೂ.7,750.26 ಕೋಟಿಗಳನ್ನು ವೆಚ್ಚ ಮಾಡಲಾಗಿದೆ. ಯೋಜನೆಯನ್ನು ಪೂರ್ಣಗೊಳಿಸುವುದಕ್ಕೆ ಇನ್ನೂ ರೂ.17,231.74 ಕೋಟಿಗಳ ಅನುದಾನದ ಅವಶ್ಯವಿರುತ್ತದೆ.
ಈ)	ಭೂಮಿ ಕಳೆದುಕೊಂಡವರಿಗೆ ಪರಿಹಾರಧನ ಒದಗಿಸಲಾಗಿದೆಯೇ; ಪರಿಹಾರಧನ ವಿತರಿಸಲು ಇರುವ ಮಾನದಂಡವೇನು;	ಭೂಸ್ವಾಧೀನ ಕಾಯ್ದೆ 2013ರ ಕಲಂ 26 ರಂತೆ ಪರಿಹಾರ ಧನ ನಿಗದಿಪಡಿಸಲಾಗಿದೆ. ಅವಾರ್ಡ್ ಅನುಮೋದನೆಯಾದ ಪ್ರಕರಣಗಳಲ್ಲಿ ಅವಾರ್ಡ್ ನೋಟೀಸ್ ಜಾರಿ ಮಾಡಿದ ನಂತರ ಪರಿಹಾರ ವಿತರಿಸಲು ಕ್ರಮ ಜರುಗಿಸಲಾಗುವುದು. ಅವಾರ್ಡ್ ಅನುಮೋದನೆಯ ಆದೇಶದಲ್ಲಿ ನಮೂದಿಸಿದ ಖಾತೆದಾರರಿಗೆ ಇಂಡೆಮ್ನಿಟಿ ಬಾಂಡ್, ಪಹಣಿ, ಇಸಿಗಳನ್ನು ಪಡೆದು ಪರಿಹಾರ ವಿತರಿಸಲು ಕ್ರಮ ಜರುಗಿಸಲಾಗುವುದು.
ಉ)	ಯಾವ ಕಾಲಮಿತಿಯೊಳಗೆ ಈ ಯೋಜನೆಯನ್ನು ಪೂರ್ಣಗೊಳಿಸಲಾಗುವುದು? (ಮಾಹಿತಿ ನೀಡುವುದು)	ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು 2023 ರ ಅಂತ್ಯಕ್ಕೆ ಪೂರ್ಣಗೊಳಿಸಲು ಯೋಜಿಸಲಾಗಿದೆ.

ಸಂಖ್ಯೆ: ಜಸಂಇ 18 ಡಬ್ಲ್ಯೂಎಲ್ಎ 2021

(ಬಿ.ಎಸ್ ಯಡಿಯೂರಪ್ಪ)
ಮುಖ್ಯಮಂತ್ರಿ

ವಿಧಾನ ಪರಿಷತ್ತು ಸದಸ್ಯರಾದ ಮಾನ್ಯ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 655ಕ್ಕೆ ಅನುಬಂಧ

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು 2 ಹಂತಗಳಲ್ಲಿ ಕೈಗೊಳ್ಳಲಾಗುತ್ತಿದೆ.

ಭೌತಿಕ ಪ್ರಗತಿ:

ಮೊದಲನೇ ಹಂತ: ಮೊದಲನೆ ಹಂತದ ಏತ ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ. ಭೌತಿಕ ಪ್ರಗತಿಯ ಪ್ರಸ್ತುತ ಹಂತದ ವಿವರ ಈ ಕೆಳಗಿನಂತಿದೆ.

- ✓ ಒಟ್ಟಾರೆ 8 ವಿಯರ್‌ಗಳ ಪೈಕಿ ವಿಯರ್ ಸಂ. 1,4,5,6,8 ಕಾಮಗಾರಿಗಳು ಪೂರ್ಣಗೊಂಡಿದ್ದು, ವಿಯರ್ ಸಂ. 2,7 ರ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿವೆ. ವಿಯರ್-3ಕ್ಕೆ ಸಂಬಂಧಿಸಿದಂತೆ GPS co-ordinates ನಲ್ಲಿ ಕಂಡು ಬಂದಂತಹ ವ್ಯತ್ಯಾಸದಿಂದ ಅರಣ್ಯ ಇಲಾಖೆಯ ಆದೇಶದಂತೆ ಕಾಮಗಾರಿಗಳು ಸ್ಥಗಿತಗೊಂಡಿದ್ದವು. ಆದರೆ, ಸದರಿ GPS co-ordinates ಗಳ ಮರು ಪರಿಶೀಲನೆಯ ನಂತರ ಈ ಹಿಂದೆ 2015ರಲ್ಲಿ ಅನುಮತಿಸಲ್ಪಟ್ಟ ಪ್ರದೇಶದಲ್ಲಿ ಪಂಪ್‌ಹೌಸ್ ಸಂ. 3 ಮತ್ತು ವಿಯರ್-3ರ ಕಾಮಗಾರಿಗಳನ್ನು ಇತ್ತೀಚೆಗೆ ಪುನರ್-ಪ್ರಾರಂಭಿಸಲಾಗಿರುತ್ತದೆ. ಬಾಕಿ ಉಳಿದ Changein GPS co-ordinates ಗೆ ಸಂಬಂಧಿಸಿದ ಗೊಂದಲ ನಿವಾರಣೆ ಕುರಿತು ಅರಣ್ಯ ಇಲಾಖೆಯೊಂದಿಗೆ ವ್ಯವಹರಿಸಲಾಗುತ್ತಿದೆ.
- ✓ 9 ಪಂಪ್‌ಹೌಸ್‌ಗಳ ಪೈಕಿ ಪಂಪ್‌ಹೌಸ್ ಸಂ. 3 ಹೊರತುಪಡಿಸಿ ಇನ್ನುಳಿದ ಎಲ್ಲಾ 8 ಪಂಪ್ ಹೌಸ್ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.
- ✓ 4 ವಿತರಣಾ ತೊಟ್ಟಿಗಳ ಪೈಕಿ ವಿತರಣಾ ತೊಟ್ಟಿ ಸಂ.3 ನ್ನು ಹೊರತುಪಡಿಸಿ ಇನ್ನುಳಿದ ವಿತರಣಾ ತೊಟ್ಟಿಗಳ ಕಾಮಗಾರಿಗಳು ಪೂರ್ಣಗೊಂಡಿರುತ್ತವೆ. ವಿತರಣಾ ತೊಟ್ಟಿ 3 ರ ಕಾಮಗಾರಿಯು ಪ್ರಗತಿಯಲ್ಲಿದೆ.
- ✓ ಒಟ್ಟು 126.31 ಕಿ.ಮೀ ಉದ್ದದ ಏರುಕೊಳವೆಯ ಪೈಕಿ, ಇದುವರೆಗೆ 112 ಕಿ.ಮೀ ಏರುಕೊಳವೆ ಕಾಮಗಾರಿಯು ಪೂರ್ಣಗೊಂಡಿದ್ದು, ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.
- ✓ 400/220 ಕೆ.ವಿ ವಿದ್ಯುತ್ ಸ್ಥಾವರ ಮತ್ತು ಸಬ್‌ಸ್ಟೇಷನ್ ಕಾಮಗಾರಿಗಳು ಕ್ರಮವಾಗಿ ಶೇ.95% ಮತ್ತು ಶೇ.85% ರಷ್ಟು ಪೂರ್ಣಗೊಂಡಿವೆ.
- ✓ ವಿದ್ಯುತ್ ವಿತರಣಾ ಕಾಮಗಾರಿ: ಎಲ್ಲಾ 08 ಸಬ್ ಸ್ಟೇಷನ್‌ಗಳಿಗೆ ವಿದ್ಯುತ್ ಅನ್ನು 324 ಟವರ್ ಗಳ ನಿರ್ಮಾಣ ಮಾಡಿ ವಿದ್ಯುತ್ ವಾಹಕಗಳನ್ನು ಅಳವಡಿಸಿ, ವಿದ್ಯುತ್ ಅನ್ನು ಸರಬರಾಜು ಮಾಡಲಾಗುವುದು. ಒಟ್ಟು 324 ಟವರ್ ಗಳ ಪೈಕಿ ಇಲ್ಲಿಯವರೆಗೆ 179 ಟವರ್‌ಗಳನ್ನು ಅಳವಡಿಸಲಾಗಿದೆ ಹಾಗೂ 52.25 ಕಿ.ಮೀ ಉದ್ದದ ವಿದ್ಯುತ್ ವಾಹಕ ಸಂಬಂಧಸಿದಂತೆ 16.4 ಕಿ.ಮೀ ವಿದ್ಯುತ್ ವಾಹಕವನ್ನು ಅಳವಡಿಸಲಾಗಿದೆ. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.
- ✓ ಒಟ್ಟಾರೆ ಮೊದಲನೇ ಹಂತದ ಏತ ಕಾಮಗಾರಿಗಳು ಮತ್ತು ವಿದ್ಯುತ್ ಕಾಮಗಾರಿಗಳನ್ನು ಪೂರ್ಣಗೊಳಿಸಿ 2021ರ ಮುಂಗಾರಿನಲ್ಲಿ ಪ್ರಾಯೋಗಿಕವಾಗಿ ನೀರನ್ನು ಹರಿಸಿ, ಯೋಜನೆಯನ್ನು ಭಾಗಶಃ ಚಾಲನೆಗೊಳಿಸಲು ಯೋಜಿಸಲಾಗಿದೆ.

ಎರಡನೇ ಹಂತ: ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಎರಡನೇ ಹಂತದಲ್ಲಿ ಸಕಲೇಶಪುರ ತಾಲ್ಲೂಕಿನ ಹರವನಹಳ್ಳಿ ಹತ್ತಿರ ವಿತರಣಾ ತೊಟ್ಟಿಯಿಂದ 260.00 ಕಿ.ಮೀ ಉದ್ದದ ಗುರುತ್ವ ಕಾಲುವೆಯನ್ನು (ಮಾರ್ಗದ ಮಧ್ಯದಲ್ಲಿ ಸುಮಾರು 10.47 ಕಿ.ಮೀ ಉದ್ದದ ಮೇಲ್ಗಾಲುವೆ ಒಳಗೊಂಡಂತೆ) ನಿರ್ಮಿಸುವುದು ಹಾಗೂ ಸಂಬಂಧಪಟ್ಟ ಫೀಡರ್ ಕಾಲುವೆಗಳನ್ನು ನಿಮಿಸುವುದು, ಭೈರಗೊಂಡ್ಲು ಜಲಾಶಯ ನಿರ್ಮಾಣ, ಭೈರಗೊಂಡ್ಲು ಜಲಾಶಯದಿಂದ ಕುಂದಾಣ ವರಗೆ ನೀರನ್ನು ಎತ್ತುವ ಕಾಮಗಾರಿ, ಕೋಲಾರ ಮತ್ತು ಶ್ರೀನಿವಾಸಪುರ ಫೀಡರ್ ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಿರುತ್ತದೆ.

- ✓ ಎರಡನೇ ಹಂತದ ಗುರುತ್ವ ಕಾಲುವೆಯ ಪೂರ್ಣ ಉದ್ದಕ್ಕೆ ಕಾಮಗಾರಿಗಳನ್ನು ಗುತ್ತಿಗೆ ವಹಿಸಲಾಗಿದ್ದು, ಕಿ.ಮೀ 0.00 ರಿಂದ ಕಿ.ಮೀ 240.00 ವರೆಗಿನ ಕಾಮಗಾರಿಗಳು ಪ್ರಗತಿಯಲ್ಲಿದ್ದು, (ಕಿ.ಮೀ 199.620 ನಿಂದ 210.090 ಕಿ.ಮೀ ವರೆಗಿನ ಬೃಹತ್ ಮೇಲ್ಗಾಲುವೆ ಒಳಗೊಂಡಂತೆ), ಸುಮಾರು 78 ಕಿ.ಮೀ ಉದ್ದದ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

✓ ಭೈರಗೊಂಡ್ಲು ಜಲಾಶಯ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ, ಗುತ್ತಿಗೆದಾರರು ಕಾಮಗಾರಿಯನ್ನು ಪ್ರಾರಂಭಿಸಲು ಪೂರ್ವಸಿದ್ಧತಾ ಕೆಲಸ ಕಾರ್ಯಗಳನ್ನು ಕೈಗೊಂಡಾಗ ಕೊರಟಗೆರೆ ತಾಲ್ಲೂಕಿನ ರೈತರು ದೊಡ್ಡಬಳ್ಳಾಪುರ ತಾಲ್ಲೂಕಿನ ಭೂಸ್ವಾಧೀನ ದರಗಳಂತೆಯೇ, ಏಕರೂಪ ಪರಿಹಾರದರ ನೀಡಲು ಒತ್ತಾಯಿಸಿದ್ದರಿಂದ ಕಾಮಗಾರಿಯು ಪ್ರಸಕ್ತ ಸ್ಥಗಿತಗೊಂಡಿರುತ್ತದೆ.

ಫೀಡರ್ ಕಾಲುವೆ ಕಾಮಗಾರಿಗಳು

ಭೈರಗೊಂಡ್ಲು ಜಲಾಶಯಕ್ಕಿಂತ ಮೊದಲು ಕವಲೊಡೆಯುವ ಫೀಡರ್ ಕಾಲುವೆಗಳನ್ನು ಕೈಗೆತ್ತಿಕೊಳ್ಳಲಾಗಿದೆ.

✓ **ಟಿ.ಜಿ.ಹಳ್ಳಿ ಮತ್ತು ರಾಮನಗರ ಫೀಡರ್:** ಎತ್ತಿನಹೊಳೆ ಗುರುತ್ವ ಕಾಲುವೆಯ ಸರಪಳಿ 244.90 ಕಿ.ಮೀ ನಿಂದ ಹೊರಡುವ ಬೆಂಗಳೂರು ಗ್ರಾಮಾಂತರ ಜಿಲ್ಲೆ ಮತ್ತು ರಾಮನಗರ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಒದಗಿಸುವ ಹಾಗೂ ನೆಲಮಂಗಲ ತಾಲ್ಲೂಕಿನ 2 ಕೆರೆಗಳನ್ನು ತುಂಬಿಸುವ ರಾಮನಗರ ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

✓ **ಮಧುಗಿರಿ ಫೀಡರ್:** ತುಮಕೂರು, ಕೊರಟಗೆರೆ, ಮಧುಗಿರಿ ಮತ್ತು ಪಾವಗಡ ತಾಲ್ಲೂಕುಗಳಿಗೆ ಕುಡಿಯುವ ನೀರಿಗಾಗಿ 1.163 ಟಿ.ಎಂ.ಸಿ ಮತ್ತು ಈ ಭಾಗದ 79 ಸಣ್ಣ ನೀರಾವರಿ ಕೆರೆಗಳಿಗೆ 1.476 ಟಿ.ಎಂ.ಸಿ. ನೀರನ್ನುಒದಗಿಸುವ ಮಧುಗಿರಿ ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

✓ **ಗೌರಿಬಿದನೂರು ಫೀಡರ್:** ಗೌರಿಬಿದನೂರು ತಾಲ್ಲೂಕಿಗೆ ಕುಡಿಯುವ ನೀರಿಗಾಗಿ 0.506 ಟಿ.ಎಂ.ಸಿ ಮತ್ತು ಗೌರಿಬಿದನೂರು, ಕೊರಟಗೆರೆ, ಮಧುಗಿರಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕುಗಳ 107 ಸಣ್ಣ ನೀರಾವರಿ ಕೆರೆಗಳಿಗೆ 1.320 ಟಿ.ಎಂ.ಸಿ. ನೀರನ್ನು ಒದಗಿಸುವ ಗೌರಿಬಿದನೂರು ಫೀಡರ್ ಕಾಲುವೆಯ ಕಾಮಗಾರಿಯನ್ನು ಪ್ರಾರಂಭಿಸಲಾಗಿದ್ದು, ಪ್ರಗತಿಯಲ್ಲಿರುತ್ತದೆ.

ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಗೆ ಜನವರಿ 2021 ರ ಅಂತ್ಯಕ್ಕೆ ರೂ.7750.25 ಕೋಟಿಗಳ ಸಂಚಿತ ವೆಚ್ಚವಾಗಿರುತ್ತದೆ.

*****